# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/123/14-15

ದಿನಾಂಕ :05-08-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್.(ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1) ಶ್ರೀಮತಿ ಹುಲಿಗೆಮ್ಮ ಗಂಡ ಹುಲಿಗೆಪ್ಪ ತಂದೆ ಚಲುವಾದಿ ದೊಡ್ಡರುದ್ರಪ್ಪ ಮನೆ ನಂ **37** ವಾರ್ಡ ನಂ **32** ಕಂಟೋನ್ ಮೆಂಟ್, ಬಳ್ಳಾರಿ<br><br>ಶ್ರೀ ಪಿ.ಹೆಚ್.ಮಂಜುನಾಥ ವಕೀಲರು ಬಳ್ಳಾರಿ | 1) ತಹಶೀಲ್ದಾರರು ಬಳ್ಳಾರಿ<br>2) ಶ್ರೀಮತಿ ಶುಭಾಷಿಣಿ ರೆಡ್ಡಿ ಗಂಡ ಸೂರ್ಯಪ್ರಕಾಶರೆಡ್ಡಿ 9 ನೇ ಕ್ರಾಸ್ ಕಪ್ಪಗಲ್ ರಸ್ತೆ ಮಸೀದಿ ಎದರು ಬಳ್ಳಾರಿ<br>3) ಶ್ರೀಮತಿ ಲಕ್ಷಮ್ಮ ಗಂಡ ಚಲುವಾದಿ ದೊಡ್ಡರುದ್ರಪ್ಪ4 )ಶ್ರೀಮತಿ ಗಾದಿಲಿಂಗಮ್ಮ ಗಂಡ ಸಿದ್ದಲಿಂಗಪ್ಪ ತಂದೆ ಚಲುವಾದಿ ದೊಡ್ಡರುದ್ರಪ್ಪ<br>5)ಶ್ರೀಮತಿ ಗುರುವಮ್ಮ @ ಪಾರ್ವತಮ್ಮ.<br>ಶ್ರೀಮತಿ ಗಾದಿಲಿಂಗಮ್ಮ ಗಂಡ ಈರೇಶ ತಂದೆ ಚಲುವಾದ ದೊಡ್ಡರುದ್ರಪ್ಪ<br>6)ಶ್ರೀಮತಿ ದ್ಯಾವಮ್ಮ ಶ್ರೀಮತಿ ಗಾದಿಲಿಂಗಮ್ಮ ಗಂಡ ಹನುಮಂತ ತಂದೆ ಚಲುವಾದ ದೊಡ್ಡರುದ್ರಪ್ಪ<br>7)ಶ್ರೀ ದೇವೇಂದ್ರ ತಂದೆ ಚಲುವಾದಿ ದೊಡ್ಡರುದ್ರಪ್ಪ ಪ್ರತಿವಾದಿ 3 ರಿಂದ 7ರ ವರಿಗೂ ವಾಸ ಕೊರ್ಲಗುಂದಿ ಗ್ರಾಮ ಬಳ್ಳಾರಿ ತಾಲೂಕು<br>8) ಶ್ರೀ ವಂಗಾ ಸತ್ಯನಾರಾಯಣರೆಡ್ಡಿ ತಂದೆ ಬಿ ಕೃಷ್ಣಾರೆಡ್ಡಿ ಹವಾಂಬಾವಿ ಸಿರುಗುಪ್ಪ ತಾಲೂಕು |

## ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕೊರ್ಲಗುಂದಿ | 396/A/1,ಮತ್ತು 396/B/1 | 0.82 1.23 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಕೋಳೂರು ಇವರ M R no 153/04-05 ದಿನಾಂಕ 01-08-2015 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 10-04-2015 ಮತ್ತು 05-08-2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 05-08-206 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಕೊರ್ಲಗುಂದಿ ಗ್ರಾಮದ ಸ.ನಂ 396/A/1,396/B/1 ವಿಸ್ತೀರ್ಣ: 0. 82ಮತ್ತು 1.23 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಕೋಳೂರು ಇವರ M R no 153/04-05 ದಿನಾಂಕ 01-08-2005 ರ ಆದೇಶದ ವಿರುದ್ಧ ಸಲ್ಲಿಸಿದ್ದು, ಪ್ರಸ್ತಾಪಿತ ಜಮೀನುಗಳ ವಿವಾದಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳು ಗ್ರಾಮದ ಹಿರಿಯರು ಮತ್ತು ಹಿತೈಶಿಗಳ ಸಮ್ಮುಖದಲ್ಲಿ ಇತ್ಯರ್ಥ ಪಡಿಸಿಕೊಂಡಿರುವುದಾಗಿ ತಿಳಿಸಿ, ಮೇಲ್ಮನವಿಯನ್ನು ಹಿಂಪಡೆಯಲು ಕೋರಿ ಈ ನ್ಯಾಯಾಲಯಕ್ಕೆ ಮೆಮೊ (NOT PRESS MEMO) ನ್ನು ಸಲ್ಲಿಸಿರುತ್ತಾರೆ.

ಕಾರಣ ಸದರಿ ಪ್ರಕರಣವನ್ನು ಮುಂದುವರೆಸಲು ಆಸಕ್ತಿ ಇಲ್ಲವೆಂದು ತಿಳಿಸಿ ವಾದಿಪರ ವಕೀಲರು ಮೆಮೋ (NOT PRESS MEMO) ಸಲ್ಲಿಸಿರುವ ಮೇರೆಗೆ ಹಾಗೂ ಮುಕ್ತಾಯಗೊಳಿಸಲು ಕೋರಿ ಸಹಿ ಮಾಡಿ ಒಪ್ಪಿಗೆಯನ್ನು ಸೂಚಿಸಿರುವುದರಿಂದ ಈ ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸುವ ಈ ಕೆಳಕಂಡಂತೆ ಆದೇಶಿಸಲಾಗಿದೆ.